ಹೇಳಿದ್ದಾರೆ. ನಾನು ಅಲ್ಲಿಗೆ ಹೋಗಿದ್ದಾಗ ಮಾನ್ಯ ಸದಸ್ಯರು ನನಗೆ ಕೇಳಿದ್ದರು, ಪಿಯುಸಿಗೆ ಕಟ್ಟಿರುವ ಒಳ್ಳೆಯ ಕಟ್ಟಡವೇನೋ ಇದೆ, ಆದರೂ ಕೂಡ ನಾನು ಅದನ್ನು ಪರಿಶೀಲನೆ ಮಾಡುತ್ತೇನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3677

ಸದಸ್ಯರ ಹೆಸರು : ಶ್ರೀ ನರೇಂದ್ರಬಾಬು ನೆ.ಲ.

ಉತ್ತರಿಸುವ ಸಚಿವರು : ಶ್ರೀ ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಪ್ರಶ್ನೆ	ಉತ್ತರ
ಅ. ಖಾಸಗಿ ಕಟ್ಟಡಗಳಲ್ಲಿ ಎಷ್ಟು ಶಾಲಾ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ನಡೆಸಲಾಗುತ್ತಿದೆ;	517 ಸರ್ಕಾರಿ, ಪ್ರಾಥಮಿಕ ಶಾಲೆಗಳು ಹಾಗೂ 13 ಪ್ರೌಢಶಾಲೆಗಳು ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿದೆ. ಯಾವುದೇ ಪದವೀ ಪೂರ್ವ ಕಾಲೇಜುಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿಲ್ಲ.
ಆ. ಇವುಗಳಿಗೆ ಸಂದಾಯ ಮಾಡುತ್ತಿರುವ ಬಾಡಿಗೆ ಹಣಎಷ್ಟು; (ಕಳೆದ 2 ವರ್ಷಗಳ ವರ್ಷವಾರು ವಿವರ ನೀಡುವುದು)	ಸಂದಾಯ ಮಾಡುತ್ತಿರುವ ಬಾಡಿಗೆ ಮೊತ್ತ 2002–03 50.25 ಲಕ್ಷ 2003–04 92.51 ಲಕ್ಷ 2004–05 87.27 ಲಕ್ಷ ಪದವಿ ಪೂರ್ವ ಕಾಲೇಜಿಗೆ ಸಂಬಂಧಿಸಿದಂತೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.
ಇ. ರಾಜಾಜಿನಗರ ವ್ಯಾಪ್ತಿಯಲ್ಲಿನ ಸರ್ಕಾರಿ ಶಾಲೆಗಳು ಖಾಸಗಿ ಕಟ್ಟಡದಲ್ಲಿ ಪಾಠ – ಪ್ರವಚನಗಳನ್ನು ನಡೆಸುತ್ತಿದ್ದು, ಕಟ್ಟಡದ ಮಾಲೀಕರುಗಳಿಗೆ ಬಾಡಿಗೆ ನೀಡದೆ ಇರುವುದರಿಂದ ಶಾಲೆ ನಡೆಸುವುದು ಕಷ್ಟ ಸಾಧ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ

ಪ್ರಶ್ನೆ	ಉತ್ತರ
ಈ. ಹಾಗಿದ್ದರೆ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?	ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದ ಆಡಳಿತ ನಿರ್ವಹಣೆಯನ್ನು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳಿಗೆ ವಹಿಸಲಾಗಿದ್ದು, ಸಂಬಂಧಿಸಿದ ಅನುದಾನವನ್ನು ಲಿಂಕ್ ಡಾಕ್ಯುಮೆಂಟ್‌ನಲ್ಲಿಯೇ ಒದಗಿಸಿಕೊಳ್ಳಬೇಕಾಗುತ್ತದೆ. ಬಾಡಿಗೆಯನ್ನು ಸಕಾಲದಲ್ಲಿ ಕಟ್ಟಡದ ಮಾಲೀಕರಿಗೆ ಪಾವತಿಸಲು ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯುಮೆಂಟ್ ನಲ್ಲಿ ಸೂಕ್ತ ಅನುದಾನವನ್ನು ಒದಗಿಸಿಕೊಳ್ಳುವಂತೆ ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ:454: ಯೋಸಕ 2004:ದಿ 23.1.2005ರಲ್ಲಿ ತಿಳಿಸಲಾಗಿದೆ.
ಉ. ಸರ್ಕಾರಿ ಶಾಲಾ ಕಟ್ಟಡಕ್ಕೋಸ್ಕರ ಬಿ.ಡಿ.ಎ. ಅಥವಾ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸ್ಥಳ ಕಾದಿರಿಸಲಾಗಿದೆಯೇ;	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಾಗರಿಕ ಸೌಲಭ್ಯ ನಿವೇಶನ ಮಂಜೂರಾತಿಗೆ ಪ್ರಕಟಣೆ ನೀಡಿದಾಗ ಅರ್ಜಿಗಳನ್ನು ಸಲ್ಲಿಸಿ ಮಂಜೂರಾತಿ ಪಡೆಯಲಾಗುತ್ತಿದೆ.
ಊ. ರಾಜಾಜಿನಗರ ಕ್ಷೇತ್ರದ 5 ಮತ್ತು 6ನೇ ಬ್ಲಾಕ್ ಹಾಗೂ ಮಹಾಲಕ್ಷ್ಮೀಪುರ ಸರ್ಕಾರಿ ಶಾಲೆಯ ಕಟ್ಟಡ ನಿರ್ಮಾಣಕ್ಕಾಗಿ ನಿವೇಶನ ಮಂಜೂರು ನೀಡಲು ಬಿಡಿಎಗೆ ಕೋರಲಾಗಿದೆಯೇ; ವಿವರ ನೀಡುವುದು?	ಮಹಾಲಕ್ಷ್ಮೀಪುರ ಸರ್ಕಾರಿ ಕಟ್ಟಡ ನಿರ್ಮಾಣಕ್ಕಾಗಿ ಮೂರು ನಿವೇಶನಗಳನ್ನು ಗುರ್ತಿಸಿ, ಯಾವುದಾದರೊಂದು ನಿವೇಶನ ಮಂಜೂರು ನೀಡಲು ಬೆಂಗಳೂರು ಉತ್ತರ ಜಿಲ್ಲಾ ಕಛೇರಿಯ ಉಪನಿರ್ದೇಶಕರಿಂದ ಬಿಡಿಎ ಆಯುಕ್ತರಿಗೆ ದಿನಾಂಕ 4.1.2005ರಂದು ಪತ್ರ ಬರೆಯಲಾಗಿದೆ.

ಶ್ರೀ ಎನ್. ಎಲ್. ನರೇಂದ್ರ ಬಾಬು : ಮಾನ್ಯ ಉಪಾಧ್ಯಕ್ಷರೆ, ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಖಾಸಗಿ ಕಟ್ಟಡಗಳಲ್ಲಿ ಸರ್ಕಾರಿ ಶಾಲೆ ಸುಮಾರು 40 ವರ್ಷಗಳಿಂದ ನಡೆಯುತ್ತಿದೆ. ಹಿಂದೆ ಆ ಶಾಲೆಯನ್ನು ಬಾಡಿಗೆ ಕಟ್ಟಲಿಲ್ಲವೆಂದು, ಹೌಸ್ ರೆಂಟ್ ಕಂಟ್ರೋಲ್ ಆಕ್ಟ್ ಪ್ರಕಾರ ಹೊರಗಡೆಗೆ ಹಾಕಿದರು. ಆ ಸಂದರ್ಭದಲ್ಲಿ ಒಬ್ಬ ನಿವೃತ್ತ ಶಿಕ್ಷಕಿ ಅನೇಕಲ್ ಶಾರಾದಾ ಪ್ರಶಸ್ತಿ ಪಡೆದವರು, ನಾನು ಅವಿವಾಹಿತೆಯಾದ್ದರಿಂದ ತನ್ನ ಕಟ್ಟಡದಲ್ಲೇ ಆ ಮಕ್ಕಳು ಬೀದಿ ಪಾಲಾಗಬಾರದೆಂದು ಆವತ್ತು ಬಹಳ ಕಡಿಮೆ ಬಾಡಿಗೆಗೆ ಕೊಟ್ಟರು. ಇವತ್ತಿಗೆ ನಾಲ್ಕು ವರ್ಷವಾಯಿತು, ನಾನು ಶಾಸಕನಾದ ದಿವಸದಿಂದ, ಜಿಲ್ಲಾ ಪಂಚಾಯತಿಯವರಿಗೆ ಮತ್ತು ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ, ಸುಮಾರು ಎರಡೂವರೆ ಲಕ್ಷ ರೂಪಾಯಿಗಳು ಒಂದು ಕಟ್ಟಡದ್ದು ಇನ್ನೊಂದು ಸುಮಾರು ಮೂರುವರೆ ಲಕ್ಷ ರೂಪಾಯಿಗಳನ್ನು ಕೊಡುತ್ತಿಲ್ಲ, ಇವತ್ತು ಆಕೆಗೆ ಪೆನ್ಷನ್ ಬರುವುದರಿಂದ ಟ್ಯಾಕ್ಸ್ ಕಟ್ಟಬೇಕು, ಎಲೆಕ್ಟ್ರಿಕ್ ಬಿಲ್, ನೀರು ಬಿಲ್ ಕಟ್ಟಬೇಕು, ಇದುವರೆವಿಗೂ ಹಣ ಪಾವತಿ ಮಾಡುತ್ತಿಲ್ಲ, ಆಕೆ ದಯವಿಟ್ಟು ಶಾಲೆಯನ್ನು ಖಾಲಿ ಮಾಡಿ ನನ್ನ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ ಎಂದು ಕೇಳಿಕೊಳ್ಳುತ್ತಿದ್ದಾಳೆ. ಮಾನ್ಯ ಸಚಿವರಲ್ಲಿ ಕೇಳುತ್ತೇನೆ, ದಯಮಾಡಿ ಜಿಲ್ಲಾ ಪಂಚಾಯತ್ ರವರಿಗೆ ಹೇಳಿ ಇರತಕ್ಕಂಥ ಎರಡು ಸರ್ಕಾರಿ ಶಾಲೆಗಳಲ್ಲಿ ನೂರಕ್ಕೆ ನೂರು ಫಲಿತಾಂಶವಿದೆ, ಸುಮಾರು 600 ಮಕ್ಕಳಿದ್ದಾರೆ. ಅಲ್ಲಿಗೆ ಬಾಡಿಗೆ ಕಟ್ಟುವುದಕ್ಕೆ ಈ ಸಾಲಿನಲ್ಲಿ ದಯವಿಟ್ಟು ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡುತ್ತೇನೆ. ನಾನು ಶಾಸಕನಾದ ನಂತರ ಆ ಶಾಲೆಗೆ ಈ ಪರಿಸ್ಥಿತಿ ಮುಂದುವರೆಯಬಾರದೆಂದು ಅಲ್ಲೆ ಇರುವಂತಹ ಬಿಡಿಎ ನಿವೇಶನಕ್ಕೆ ನಾನು ಮುಖ್ಯಮಂತ್ರಿಗಳನ್ನು ಹಾಗೂ ಮುಖ್ಯ ಕಾರ್ಯದರ್ಶಿಯವರನ್ನು ಖುದ್ದಾಗಿ ಭೇಟಿ ಮಾಡಿ, ದಯಮಾಡಿ ಆ ನಿವೇಶನವನ್ನು ಕೊಡಿಸಿ ಎಂದು ಕೇಳಿದೆ 8 ತಿಂಗಳಾಯಿತು, ಬಿಡಿಎಗೆ ಅಲೆಯುತ್ತಿದ್ದೇನೆ, ಒಂದು ಖಾಸಗಿ ಶಿಕ್ಷಣ ಸಂಸ್ಥೆಯ ಶಾಲೆಗೆ ರಾಜಾಜಿನಗರದ ಭಾಷ್ಯಂ ಸರ್ಕಲ್‌ನಲ್ಲಿ ನಿವೇಶನ ಕೊಟ್ಟಿದ್ದಾರೆ, ಆದರೆ 5 ಮತ್ತು 6ನೇ ಬ್ಲಾಕ್‌ನಲ್ಲಿರುವ ಈ ಸರ್ಕಾರಿ ಶಾಲೆಗೆ ಇವತ್ತು ಲೈಟ್ ಇಲ್ಲ, ನೀರಿಲ್ಲ, ಬೀದಿಯಲ್ಲಿ ಕುಳಿತುಕೊಳ್ಳುತ್ತಿದ್ದಾರೆ, ಹೊರಗಡೆ ಊಟ ಮಾಡುತ್ತಿದ್ದಾರೆ, ಅಂತಹ ಜಾಗದಲ್ಲಿ ಕಲಿಯುತ್ತಿದ್ದಾರೆ. ದಯವಿಟ್ಟು ಬಿಡಿಎಗೆ ಇಂತಹದ್ದಕ್ಕೆ ನಿವೇಶನ ಕೊಡುವ ಉದ್ದೇಶವಿದೆಯಾ? ಇದೆ ಎನ್ನುವುದಾದರೆ ಎಷ್ಟು ದಿವಸಗಳಲ್ಲಿ ಕೊಡುತ್ತಾರೆನ್ನುವುದನ್ನು ತಿಳಿಸಬೇಕು ಎಂದು ಸರ್ಕಾರದಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಎಂ. ರಾಮಲಿಂಗಾರೆಡ್ಡಿ: ನಮ್ಮ ರಾಜ್ಯದಲ್ಲಿ 517 ಸರ್ಕಾರಿ ಪ್ರಾಥಮಿಕ ಶಾಲೆಗಳು, 13 ಪ್ರೌಢಶಾಲೆಗಳು ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿವೆ. 2002, 2003, 2004, 2005 ಸುಮಾರು ಈ ವರ್ಷವೆ 2004–05ರಲ್ಲಿ ಸುಮಾರು 87 ಲಕ್ಷ ರೂಪಾಯಿಗಳನ್ನು ಬಾಡಿಗೆಗೆ ಕೊಟ್ಟಿದ್ದೇವೆ, ಇದನ್ನು ನಿಜವಾಗಿಯೂ ಜಿಲ್ಲಾ ಪಂಚಾಯತ್‌ರವರು ಕೊಡಬೇಕು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಆಡಳಿತ ನಿರ್ವಹಣೆ ಜಿಲ್ಲಾ ಪಂಚಾಯತ್ ಅವರು ಕೊಡಬೇಕು. ಅವರಿಗೆ 23.01.2005 ರಲ್ಲಿ ಸುತ್ತೋಲೆಯನ್ನು ಕಳುಹಿಸಿ ನಿಮ್ಮ ಪ್ಲಾನಲ್ಲೆ ಇದಕ್ಕೆ ಪ್ರಾವಿಷನ್ ಮಾಡಿಕೊಳ್ಳಿ ಎಂದು ಹೇಳಿದ್ದೇವೆ. ಅಲ್ಲಿ ಅವರು ಮಾಡಿಕೊಳ್ಳದೆ ತೊಂದರೆಯಾಗಿದೆ ಅನಿಸುತ್ತದೆ. ಮತ್ತು ಬೆಂಗಳೂರು ನಗರ ಜಿಲ್ಲೆಯಲ್ಲಿ ಸುಮಾರು 27 ಲಕ್ಷ 77 ಸಾವಿರ ರೂಪಾಯಿಗಳ ಹಣ ಬೆಂಗಳೂರು ದಕ್ಷಿಣ ಜಿಲ್ಲೆ ಒಂದರಲ್ಲೆ ಅವರು ಬಾಡಿಗೆ ರೂಪದಲ್ಲಿ ಬಾಕಿ ಇಟ್ಟುಕೊಂಡಿದ್ದಾರೆ. ನರೇಂದ್ರಬಾಬುರವರು ನಿರ್ದಿಷ್ಟವಾಗಿ ಯಾವುದೋ ಒಂದು ಕೇಸ್ ಹೇಳಿದ್ದಾರೆ. ನಾನು ನಮ್ಮ ಜಿಲ್ಲಾ ಪಂಚಾಯತ್ ಮಂತ್ರಿಗಳಿದ್ದಾರೆ, ಜಿಲ್ಲಾ ಪಂಚಾಯತ್ ಕಾರ್ಯದರ್ಶಿಯವರನ್ನು ಕರೆಸಿ ಇದನ್ನು ಆದಷ್ಟು ಬೇಗ ಸೆಟ್ಲಿಮೆಂಟ್ ಮಾಡೋಣ. ಸುಮಾರು 517 ಶಾಲೆಗಳು ಈಗ ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ. ಇಲ್ಲಿರುವ ಶಾಸಕರು ಎಲ್ಲೆಲ್ಲಿ ಈ ರೀತಿ ಇದ್ದರೆ, ನಿವೇಶನಗಳನ್ನು ಕೊಟ್ಟರೆ ನಾವು ಖಂಡಿತ ಎಸ್ ಎಸ್ ನಲ್ಲೋ ಅಥವಾ ಆರ್‌ಐಡಿಎಫ್‌ನಲ್ಲಿ ರೂಂಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಎನ್.ಎಲ್. ನರೇಂದ್ರ ಬಾಬು: ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಇವತ್ತು ಜನಸಾಮಾನ್ಯರಿಗೆ ಡೊನೇಷನ್ ಪದ್ಧತಿ ಕಿತ್ತು ತಿನ್ನುತ್ತಿದೆ, ನಮ್ಮ ಕ್ಷೇತ್ರದಲ್ಲಿರುವ ಆರ್‌ಎಂಸಿ, ಎಪಿಎಂಸಿ ಯಾರ್ಡ್‌ಗಳ ಮಕ್ಕಳು, ಕೂಲಿಕಾರ್ಮಿಕರ ಮಕ್ಕಳು ಆ ಶಾಲೆಯಲ್ಲಿ ಕಲಿಯುತ್ತಿರುವವರು, ಸ್ವಂತ ಕಟ್ಟಡವನ್ನು ಕಟ್ಟಿಕೊಡುವುದಕ್ಕೆ ಉಚಿತವಾಗಿ ದಾನಿಗಳಿದ್ದಾರೆ, ದಯವಿಟ್ಟು ಸರ್ಕಾರಕ್ಕೆ ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ದಯವಿಟ್ಟು ಯಾವುದೋ ಕ್ಲಬ್‌ಗೂ ಡೊನೇಷನ್ ಕಲೆಕ್ಟ್ ಮಾಡುವ ಶಿಕ್ಷಣ ಸಂಸ್ಥೆಗಳಿಗೆ, ನಿವೇಶನ ಕೊಡುತ್ತಾರೆ ಇಲ್ಲಿ ನಾನು ಸ್ಥಳೀಯ ಶಾಸಕನಾಗಿ ನಾನು ಕೇಳತಕ್ಕಂಥ ಸರ್ಕಾರಿ ಶಾಲೆಗೆ ನಿವೇಶನ ಕೊಡುವುದಿಲ್ಲವೆನ್ನುದಾದರೆ ಏನರ್ಥ? ದಯವಿಟ್ಟು ಸರ್ಕಾರದಿಂದ ಭರವಸೆ ಕೊಟ್ಟು, ಸರ್ಕಾರಿ ಈ ಎರಡು ಶಾಲೆಗಳಿಗೆ, ನೂರು ಪರ್ಸೆಂಟ್ ಫಲಿತಾಂಶ ಬರುತ್ತಿರುವ ಮಹಾಲಕ್ಷ್ಮೀ ಲೇಔಟ್‌ನ ಗೌರ್ನಮೆಂಟ್ ಶಾಲೆ ಮತ್ತು 5 ಮತ್ತು 6 ಬ್ಲಾಕ್ ನಲ್ಲಿರುವ ಸರ್ಕಾರಿ ಶಾಲೆಗಳಿಗೆ ನಿವೇಶನವನ್ನು ತೋರಿಸಿದ್ದೇನೆ, ನಾನೇ ಖುದ್ದಾಗಿ ಬಿಡಿಎಗೆ ಹತ್ತು ಸಾರಿ ಹೋಗಿದ್ದೇವೆ ಸಂಬಂಧಪಟ್ಟವರಿಗೆ ಸೂಚನೆ ಕೊಟ್ಟು ಭರವಸೆ ಕೊಡಬೇಕೆಂದು ತಮ್ಮ ಮೂಲಕ ನಾನು ವಿನಂತಿ ಮಾಡುತ್ತೇನೆ.